ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಕೈಗೊಂಡ ಕಾರ್ಯಕ್ರಮ

1569 - ಶ್ರೀ ರಾಜುಗೌಡ (ಹನೂರು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಅಭಿವೃದ್ಧಿ ಯೋಜನೆಯಂತೆ 1990 ಡಿಸೆಂಬರ್ ಅಂತ್ಯದ ವೇಳೆಗೆ ಮೈಸೂರು ಜಿಲ್ಲೆಯಲ್ಲಿ ಎಷ್ಟು ತೆಂಗಿನ ಸಸಿಗಳು ಎಷ್ಟು ಹಣ್ಣಿನ ಸಸಿಗಳು, ಎಷ್ಟು ಕಿಲೋ ತರಕಾರಿ ಬೀಜಗಳನ್ನು ವಿತರಿಸಲಾಗಿದೆ?

ಆ) ವಿಶೇಷ ಘಟಕ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ತೋಟಗಾರಿಕೆ ಕೈಗೊಳ್ಳಲು ಆರ್ಥಿಕ ನೆರವು ಕಲ್ಪಿಸಲಾಗಿದೆ?

ಇ) ವಿಶೇಷ ಘಟಕ ಯೋಜನೆಯ ಅರ್ಧ ಎಕರೆ ತೆಂಗಿನ ತೋಟಗಳ ನಿರ್ವಹಣೆಗಾಗಿ ಎಷ್ಟು ಫಲಾನುಭವಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ 1990ನೇ ಡಿಸೆಂಬರ್ ಅಂತ್ಯದವರೆಗೆ ಈ ಕೆಳಕಂಡಂತೆ ವಿವರಿಸಲಾಗಿದೆ.

1. ತೆಂಗಿನ ಸಸಿಗಳು - 92,260
2. ಹಣ್ಣಿನ ಸಸಿಗಳು - 1,18,693
3. ತರಕಾರಿ ಬೀಜಗಳು - 4,316 ಕೆ.ಜಿ.

ಆ) 201 ಫಲಾನುಭವಿಗಳು.

ಇ) 1990ನೇ ಡಿಸೆಂಬರ್ ಅಂತ್ಯಕ್ಕೆ 174 ಫಲಾನುಭವಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ.

ಪಾರ್ಥೇನಿಯಂ ಬಗ್ಗೆ

1571 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾರ್ಥೇನಿಯಮ್ ಸೂಕ್ತ ಸಂಸ್ಕರಣೆಯ ನಂತರ ಉತ್ತಮ ಪಶು ಆಹಾರವಾಗಬಲ್ಲದು ಎಂಬುದು ನಿಜವೇ?

ಆ) ಹಾಗಿದ್ದಲ್ಲಿ ಒಂದು ಕೆ.ಜಿ. ಹುಲ್ಲು ತಯಾರುಮಾಡಲು ಉತ್ಪಾದನಾ ವೆಚ್ಚ ಹಾಗೂ ಕಾಲಮಿತಿ ಎಷ್ಟಾಗುತ್ತದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಸಚಿವರು) :

ಅ) ಹೌದು.

ಆ) ಇದನ್ನು ರಸ ಮೇವಾಗಿ ಪರಿವರ್ತಿಸಲು ಸುಮಾರು 3 ತಿಂಗಳ ಸಮಯ ಬೇಕಾಗುತ್ತದೆ ಹಾಗೂ ಶೇ. 5 ರಷ್ಟನ್ನೂ ಮಾತ್ರ ಬೇರೆ ಹಸಿರು ಮೇವಿನ ಜೊತೆ ಸೇರಿಸಿ ಉಪಯೋಗಿಸಬಹುದು.

ರೈತರುಗಳಿಗೆ ಪಟ್ಟಾ ಪುಸ್ತಕ ವಿತರಣೆ

1739 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?